<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

<u>ಸಿ.ಸಿ.ನಂ:೩೦೨/೨೦೧೭</u>

**ಸಿ.ಡಬ್ಲ್ಯೂ–೦೮ ಪಿ.ಡಬ್ಲ್ಯೂ-೦೪**

| | | |
|---|---|---|
| ಹೆಸರು | : | ಮಹಾದೇವ |
| ತಂದೆ:ಗಂಡ | : | ಜಂಬಯ್ಯಾ ಪಂಚಮುಖಿ |
| ವಯಸ್ಸು | : | ೪೫ ವರ್ಷ |
| ಉದ್ಯೋಗ | : | ಪಿ.ಐ. |
| ವಾಸಸ್ಥಳ | : | ಆಳಂದ |

ದಿನಾಂಕ:೨೯.೦೧.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ.

---

<u>ಕಲಂ ೨೯೯ ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷಿ ವಿಚಾರಣೆ:</u>

<u>ಮುಖ್ಯ ವಿಚಾರಣೆ</u>: ಮಾನ್ಯ ಸ.ಸ.ಅ. ರವರಿಂದ

ನಾನು ೧೩.೧೦.೨೦೧೩ ರಿಂದ ದಿ.೧೮.೦೪.೨೦೧೬ ರವೆರೆಗೆ ಆಳಂದ ಪೋಲಿಸ ಠಾಣೆಯಲ್ಲಿ ಪಿ.ಎಸ.ಐ ಆಗಿ ಕೆಲಸ ಮಾಡಿರುತ್ತೇನೆ.

ದಿ: ೩೦.೦೩.೨೦೧೬ ರಂದು ನಾನು ಠಾಣಾ ಅಮಲ್ದಾರ ಕರ್ತವ್ಯದಲ್ಲಿದ್ದಾಗ ಚಾಸಾ-೧ ರವರು ಲಿಖಿತ ಫಿರ್ಯಾದಿಯನ್ನು ಸಲ್ಲಿಸಿದ ಮೇರೆಗೆ ನಮ್ಮ ಠಾಣಾ ಗುನ್ನಾ ಸಂಖ್ಯೆ ೭೦/೨೦೧೬ ನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿ-೩ ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಹಿಯನ್ನು ನಿಪಿ-೩(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವ.ದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪ್ರ.ವ.ವನ್ನು ನಿಪಿ-೧೬ ಎಂದು ಸಹಿಯನ್ನು ನಿಪಿ-೧೬(ಎ) ಎಂದು ಗುರುತಿಸಲಾಯಿತು.

ಮರುದಿನ ತನಿಖೆಯನ್ನು ಕೈಗೆತ್ತಿಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-೧ ರವರು ತೋರಿಸಿದ ಸ್ಥಳದಲ್ಲಿ ಚಾಸಾ-೨ ಮತ್ತು ೩ ರವರ ಸಮಕ್ಷಮ ೯.೩೦ ರಿಂದ ೧೦.೩೦ ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ-೧೭ ಎಂದು ಸಹಿಯನ್ನು ನಿಪಿ-೧೭(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-೪ ರಿಂದ ೭ ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡೆನು. ಮುಂದಿನ ತನಿಖೆಗಾಗಿ ಚಾಸಾ-೯ ರವರಿಗೆ ಈ ಪ್ರಕರಣದ ಕಡತವನ್ನು ಹಸ್ತಾಂತರಿಸಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ:</u>

ಆರೋಪಿ ತಲೆ ಮರೆಸಿಕೊಂಡಿರುತ್ತಾನೆ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.